ಒಳ್ಳೋರು'ಎಂದು ವರ್ಣಿಸಿದ.

ಅಷ್ಟರಲ್ಲೇ ಫೋನು ರಿಂಗಣಿಸಿತು. ಗಂಡನ ಮೊಬೈಲಿನ ಸಂಭ್ರಮವನ್ನು ನೋಡುತ್ತಲೇ ನಿಂತಿದ್ದಳು ಮಾದೇವಿ. ಅವನು ದೇವಪ್ಪನೊಂದಿಗೆ ಮಾತನಾಡುತ್ತಿದ್ದ. ಆದರೆ ಬಸನಿಂಗನ ಮುಖ ಗಂಭೀರವಾಗಿತ್ತು. ಮಾದೇವಿ ಹೇಳಿದ್ದೆಲ್ಲ ಕೇಳಿ ವ್ಯಗ್ರನಾದವ, 'ಇದನ್ನೆಲ್ಲ ಮೊದಲೇ ಯೋಳ್ಬಾರ್ದಿತ್ತೆ ನಂಗೆ? ನಾನೆಲ್ಲೋ ಗೌಡರ ತಾವ ಈಸ್ಕೊಂಡಿದೀರಿ ಅನ್ಕಂಡಿದ್ದೆ'ಎಂದು ಕೂಗಾಡಿದ. 'ನಿಂಗೆ ಯೋಳಿದ್ರೆ ಸುಮ್ಕೆ ತಲೆ ಕೆಡಿಸ್ಕಂತೀಯ. ಓದೋ ಹುಡುಗ.. ಅಂತ ಬಿಟ್ವಿ'ಎಂದಳು ಮಾದೇವಿ. ನಂಜುಂಡ ಬಂದು ಆಗಲೇ ದೇವಪ್ಪ ಅವರ ಧರ್ಮಕ್ಕೆ ಸೇರಿದ್ದನ್ನು ಹೇಳಿದ. ಅಷ್ಟೇ ಅಲ್ಲ.. ಕೇರಿಯಲ್ಲಿ ಇನ್ನೂ ಕೆಲವರು ಸೇರಿದ್ದರು. 'ನಾವೂ ಸೇರಿಬಿಡಾಣ'ಎಂದ ನಂಜುಂಡ. ಬಸನಿಂಗ ಕೋಪದಿಂದ ಕಿಡಿಕಿಡಿಯಾದ. 'ಯಾಕೀಗ ನಿಮಗೆ ಗುಡೀರವ್ವ ನೆನಪಾಗ್ಲಿಲ್ವಾ? ಮೊದ್ಲಿಂದ ಆಚರಿಸಿಕೊಂಡು ಬಂದ ಪೂಜೆ, ಪುನಸ್ಕಾರ ಎಲ್ಲಾ ಮರ್ತು ಬಿಡೋದಾ? ಕಷ್ಟಕ್ಕೆ ದುಡ್ಡು ಕೊಟ್ರು ಅಂದಾಕ್ಷಣ ಧರ್ಮಾನೇ ಬದಲಾಯ್ಸಿಕೊಳ್ಳೋದಾ? ನಮ್ಮತನ ಅನ್ನೋದು ಬ್ಯಾಡ್ವಾ? ನಾನು ದುಡ್ಡು ಕೊಡ್ತೀನಿ. ಅವರ ಸಾಲಾ ಮುಟ್ಟಸು. ಮತ್ತೆ ಆ ಕಡೆ ತಿರುಗಿ ನೋಡಬೇಡ' ಎಂದು ಕೂಗಾಡಿದ. 'ನಾನು ಕೆಲಸ ಮಾಡುವ ಕಂಪನಿಯ ಮಾಲೀಕರು ಸೇನೆಯ ಕಾರ್ಯಕರ್ತರು. ಈಗ ನಾನೂ ಅದಕ್ಕೆ ಸೇರಿದೀನಿ. ಇಲ್ಲಿಂದ ಹಿಂದುಗಳ ಓಟು ತರಸ್ತೀನಿ..ಅಂತ ಮಾತು ಕೊಟ್ಟಿದೀನಿ. ತರಸ್ಲಿಲ್ಲ ಅಂದ್ರೆ ನನ್ನ ನೌಕರಿ ಹೋಗುತ್ತೆ' ಎಂದ. ನಂಜುಂಡನೂ ಸುಮ್ಮನಿರದೇ, 'ಆಗಾಕಿಲ್ಲ ಕಣ್ಲಾ. ಏಟೋ ದಿನಗಳಿಂದ ಅವ್ರು ನಮ್ಮ ಕಷ್ಟ ಸುಖಕ್ಕಾಗಿದಾರೆ. ಅವರು ಹೇಳಿದಂಗೆ ಕೇಳೋದೇಯಾ'ಎಂದ. ಕೊನೆಯ ಅಸ್ತ್ರವೆಂಬಂತೆ 'ಹಾಗಾದ್ರೆ ನೀನು ಮಗನ್ನ ಮರ್ತ ಬಿಡಬೇಕಾಗುತ್ತೆ' ಎಂದ ಬಸನಿಂಗ ಗಂಭೀರವಾಗಿ. ಮಾದೇವಿ ಅಳುತ್ತ ಇಬ್ಬರನ್ನೂ ಸಂತೈಸಬೇಕಾದರೆ ಸಾಕೋಸಾಕಾಗಿತ್ತು. ಇತ್ತ ಹೊಂಡದ ಸುತ್ತಲಿನ ಕಲ್ಲುಗಳು ನಿಧಾನವಾಗಿ ಹೊಂಡದೊಳಗೆ ಜಾರುತ್ತಿದ್ದವು.. ಮಳೆಯ ಹೊಡೆತಕ್ಕೋ..ಬಿಸಿಲಿನ ಬೇಗೆಗೊ..

ಹೊರಗೂ ಚುನಾವಣೆಯ ಕಾವು ಏರಿತ್ತು. ಇಡೀ ಹಳ್ಳಿಗೆ ಹಳ್ಳಿಯೇ ಇಬ್ಭಾಗವಾದಂತಾಗಿತ್ತು. ಕಟ್ಟೆಗೆ ಕುಳಿತ ಹಿರಿಯರು, 'ಈ ಮೊದಲು ಇಂಥಾ ಗಲಾಟೇನೆ ನೋಡಿರ್ಲಿಲ್ಲ. ಜಾತಿ..ಧರ್ಮ ಅಂತ ಹಳ್ಳೀಲಿ ಜಗಳ ಆದದ್ದೇ ಇಲ್ಲ. ಶ್ರೀರಾಮು, ಗುಡೀರವ್ವನ ಪಟಗಳನ್ನ ಕರೀಮ ತನ್ನ ಗಾಡೀಲೆ ತೊಗೊಂಬರೋನು. ಎಲ್ರೂ ಸೇರ್ಕೊಂಡೇ ಗುಡೀರವ್ವನ ಜಾತ್ರೆ ಮಾಡಾದು. ಇದೇನ್ ಕಾಲ ಬಂತಪ್ಪಾ?' ಎಂದು ಮಾತನಾಡುತ್ತಿದ್ದರು. ಸೋಜಪ್ಪ ನಂಜುಂಡನಿಗೆ ಹೇಳಿ ಕಳಿಸಿದರೆ ಗೌಡರು ಬಸನಿಂಗನಿಗಾಗಿ ಆಳುಗಳನ್ನು ಕಳಿಸಿದರು. ಮಾದೇವಿ



ಇಬ್ಬರನ್ನೂ ಗರ ಬಡಿದವಳಂತೆ ನೋಡುತ್ತಿದ್ದಳು. ಅವಳೆಷ್ಟೇ ಸಂತೈಸಿದರೂ.. ಬೇಡಿಕೊಂಡರೂ.. ಇಬ್ಬರೂ ಮಾತನಾಡದೇ ಮುನಿಸಿಕೊಂಡು ವಿರುದ್ಧ ದಿಕ್ಕುಗಳತ್ತ ಮುಖ ಮಾಡಿ ಮಲಗಿದ್ದರು. ಮಾದೇವಿಗೆ ದಿಗಿಲು ಬಿದ್ದಿತ್ತು. ಏನೋ ಸಂತಸದ ಕ್ಷಣಗಳು ಬಂದು ಎಲ್ಲಾ ಸರಿಯಾಗುತ್ತೆ ಅನ್ನೋವಾಗ ಈ ಜಗಳ...ಕದನ. ಮಲಗಿದರೂ ನೆಮ್ಮದಿಯಿಲ್ಲ. ಕನಸಿನಲ್ಲಿ ನಂಜುಂಡ ಚರ್ಚಿನತ್ತ ಎಳೆದರೆ ಬಸನಿಂಗ ದೇವಸ್ಥಾನದತ್ತ ಎಳೆಯುತ್ತಿದ್ದ. ಅವಳ ಕೂಗನ್ನು ಇಬ್ಬರೂ ಕೇಳುವ ಸ್ಥಿತಿಯಲ್ಲಿರಲಿಲ್ಲ. ಇಬ್ಬರ ಗೊಡವೆಯೂ ಬೇಡವೆಂದು ಬಿಡಿಸಿಕೊಂಡು ಓಡುತ್ತಲೇ ಇದ್ದಳು ಮಾದೇವಿ ಹಿಂದೆ ನೋಡದೇ...

●